ಈ	ಕೇಂದ್ರೀಯ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ ರಾಜ್ಯದ ಪಾಲು	
1	ರಾಮಗುಂಡಂ ಎಸ್ ಟಿ ಪಿ ಎನ್	345
2	ನ್ಪೆವೇಲಿ ಲಿಗ್ನೈಟ್ ನಿಗಮ 1	84
3	ನ್ಪೆವೇಲಿ ಲಿಗ್ನೈಟ್ ನಿಗಮ 2	115
4	ನ್ಪೆವೇಲಿ ಲಿಗ್ನೈಟ್ ನಿಗಮ ವಿಸ್ತರಣೆ	100
5	ಮದ್ರಾಸ್ ಅಣು ವಿದ್ಯುತ್ ಕೇಂದ್ರ	21
6	ಕೈಗಾ ಅಣು ವಿದ್ಯುತ್ ಕೇಂದ್ರ	108
7	ತಾಲ್ಚೇರ್	396
8	ರಾಮಗುಂಡಂ ಹಂತ–3	87
	ಒಟ್ಟು (ಈ)	1256
	ಒಟ್ಟು ಮೊತ್ತ (ಅ+ ಆ +ಇ+ ಈ)	8048 50

362 (334) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಮಹಿಳಾ ಮತ್ತು ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹರ ಮತಕ್ಷೇತ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಮಿತಿಗಳನ್ನು ರಚನೆ ಮಾಡದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ನೇಮಕಾತಿ ಸಮಿತಿಗಳ ರಚನೆ ವಿಳಂಬಕ್ಕೆ ಕಾರಣಗಳೇನು,

ಇ) ವಿಳಂಬ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ,

ಈ) ಬಂದಿದ್ದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಮಿತಿಗಳನ್ನು ಇನ್ನು ಎಷ್ಟು ದಿನದೊಳಗೆ ರಚನೆ ಮಾಡಲಾಗುವುದು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಕಲ್ಯಾಣ ಸಚಿವರು)

ಅ) ಪ್ರಕ್ರಿಯೆಯನ್ನು ಸರ್ಕಾರವು ಸದ್ಯಕ್ಕೆ ಸ್ಥಗಿತಗೊಳಿಸಿದೆ

ಆ) ರಾಜ್ಯಕ್ಕೆ ಮಂಜೂರಾಗಿರುವ ಹೊಸ 11,313 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುವುದಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ ಮಮಇ 199 ಐಸಿಡಿ 2006, ದಿ 15 7 2006ರಲ್ಲಿ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಮಿತಿಯನ್ನು ಮನರ್ ರಚಿಸಲಾಗಿದೆ ಅದಕ್ಕೆ ಮುಂದುವರಿದಂತೆ ದಿ 21 7 2006 ಮತ್ತು 7 9 2006ರಂದು ಮತ್ತೆ ಎರಡು ಆದೇಶಗಳನ್ನು

ಹೊರಡಿಸಲಾಗಿದೆ ಶೇ 89 92ರಷ್ಟಿರುವ ಗ್ರಾಮೀಣ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಆಯ್ಕೆಯಾದ ಅಂಗನವಾಡಿ ಕಾರ್ಯಕರ್ತೆಯರು ಜುಲೈ 2006ರ ಅಂತ್ಯದಲ್ಲಿ ತಮ್ಮ ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಶೇ 3 5ರಷ್ಟಿರುವ ನಗರ ಪ್ರದೇಶಗಳ ಅಂಗನವಾಡಿ ಕೇಂದ್ರಗಳ ನೇಮಕಾತಿ ಸಮಿತಿ ಮನರ್ ರಚನೆ ಕಾರ್ಯ ಪರಿಶೀಲಿಸುತ್ತಿರುವಾಗ ಮಾನ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂ 11276/06, 13908/06 ಮತ್ತು 14244/06 ಗಳಲ್ಲಿ ಅನುಕ್ರಮವಾಗಿ ದಿ 21 8 2006, 29 9 2006 ಮತ್ತು 11 10 2006ರಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಗೆ ತಡೆಯಾಜ್ಞೆ ನೀಡಿರುವುದರಿಂದ ನಗರ ಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯ ಪುನರ್ ರಚನೆ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ ಆದ್ದರಿಂದ ನಗರ ಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯ ಮನರ್ ರಚನೆಯಲ್ಲಿ ವಿಳಂಬವಾಗಿರುತ್ತದೆ

ಇ) ಅನ್ವಯಿಸುವುದಿಲ್ಲ

ಈ) ತಡೆಯಾಜ್ಞೆ ತೆರವಾದ ಕೂಡಲೇ ನಗರ ಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿ ಮನರ್ ರಚನೆ ಕಾರ್ಯ ಕೈಗೆತ್ತಿಕೊಳ್ಳಲಾಗುವುದು

363 (335) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ ತೆರಿಗೆಯಿಂದ, ಕಟ್ಟಡ ಅನುಮತಿಯಿಂದ ಸಿ ಸಿ ಯಿಂದ ಹಾಗೂ ಇನ್ನಿತರೆ ಮೂಲಗಳಿಂದ ಕಳೆದ ಮೂರು ವರ್ಷ ಗಳಿಂದ ಬಂದ ಆದಾಯವೆಷ್ಟು (2004–05, 2005–07 ಮತ್ತು 2006–07ನೇ ಸಾಲುಗಳ ವಿವರ ನೀಡುವುದು),

ಆ) ಒಟ್ಟು ಬಂದ ಆದಾಯದಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸ ಕೈಗೆತ್ತಿಕೊಳ್ಳಲಾಗಿದೆ (ಪೂರ್ಣ ವಿವರ ನೀಡುವುದು)?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಕಳೆದ ಮೂರು ವರ್ಷಗಳ ಪಾಲಿಕೆ ಆದಾಯದ ವಿವರ

(ರೂ ಲಕ್ಷಗಳಲ್ಲಿ)

ಕ್ರ ಸಂ	ವಿವರ	2004–05	2005–06	2006–07
1	ಆಸ್ತಿ ತೆರಿಗೆ	1548 14	1635 49	996 11